

بِسْمِ اللّٰہِ الرَّحْمٰنِ الرَّحِیْمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‍ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **06-07-2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಬದರ್ ಯುದ್ಧದಲ್ಲಿ ಭಾಗವಹಿಸಿದ ಬದರೀ ಸಹಾಬರ ಬಗ್ಗೆ ನಾನು ಪ್ರಸ್ತಾಪಿಸುತ್ತಾ ಇದ್ದೇನೆ. ಚರಿತ್ರೆ ಮತ್ತು ವರದಿಗಳಿಂದ ಕೆಲವು ಸಹಾಬರ ಜೀವಿತದ ಬಗ್ಗೆ ಬಹಳ ವಿಶದವಾಗಿ ತಿಳಿಯುತ್ತಿವೆ. ಆದರೆ ಕೆಲವರ ಬಗ್ಗೆ ಬಹಳ ಸಂಕ್ಷಿಪ್ತ ವಿವರಣೆಗಳು ಮಾತ್ರ ದೊರಕುತ್ತಿವೆ. ಬದರ್ ಯುದ್ಧದಲ್ಲಿ ಭಾಗವಹಿಸಿದ ಕಾರಣ ಅವರೆಲ್ಲರ ಸ್ಥಾನ ಮಹತ್ವಪೂರ್ಣವೇ ಆಗಿರುತ್ತವೆ. ಆದುದರಿಂದ ಅಂತಹ ಸಹಾಬಿಗಳ ವಿವರ ಕೆಲವು ವಾಕ್ಯಗಳಿಗೆ ಸೀಮಿತವಾಗಿದ್ದರೂ ಅದರ ಬಗ್ಗೆ ಪ್ರಸ್ತಾಪಿಸುವುದು ಉತ್ತಮವೇ ಆಗಿದೆ. ಇಂದು ನಾನು ವಿವರಿಸುವ ಸಹಾಬಿಗಳಲ್ಲಿ ಕೆಲವರಿಗೆ ಸಂಬಂಧಿಸಿದ ವಿವರಣೆಗಳು ಬಹಳ ಸಂಕ್ಷಿಪ್ತವಾಗಿವೆ.

ಒಬ್ಬ ಸಹಾಬಿ ಸಬೀಅ ಬಿನ್ ಖೈಸ್ ಬಿನ್ ಐಸ. ಅವರು ಮದೀನ ನಿವಾಸಿಯೂ ಖಝ್ರಜ್ ಗೋತ್ರದವರೂ ಆಗಿದ್ದರು. ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರ ತಾಯಿಯ ಹೆಸರು ಖದೀಜ ಬಿನ್ತ್ ಉಮರ್ ಬಿನ್ ಝೈದ್. ಅವರ ಒಬ್ಬ ಪುತ್ರ ಅಬ್ದುಲ್ಲಾ ಶೈಶವದಲ್ಲಿ ಮೃತರಾದರು. ಹಝ್ರತ್ ಉಬಾದ ಬಿನ್ ಖೈಸ್ ಮತ್ತು ಝೈದ್ ಬಿನ್ ಖೈಸ್ ಅವರ ಸಹೋದರರಾಗಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಅನೀಸ್ ಬಿನ್ ಖತಾದ. ಅವರು ಉಹುದ್ ಯುದ್ಧದಲ್ಲಿ ಶಹೀದರಾದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಅವರಿಗೆ ಮಕ್ಕಳಿರಲಿಲ್ಲ. ಒಂದು ವರದಿ ಪ್ರಕಾರ ಅವರು ಶಹೀದರಾಗುವ ಮೊದಲು ಖನ್‌ಸಾ ಬಿನ್ತ್ ಖುದ್ದಾಮ್‌ರನ್ನು ವಿವಾಹವಾಗಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಮಲೀಲ್ ಬಿನ್ ವಬ್ರ. ಅವರು ಖಝ್ರಜ್ ಗೋತ್ರದ ಬನೂ ಅಜ್‌ಲಾನ್ ಶಾಖೆಗೆ ಸೇರಿದವರು. ಅವರು ಬದರ್ ಮತ್ತು ಉಹುದ್ ಯುದ್ಧದಲ್ಲಿ ಭಾಗವಹಿಸಿದ್ದರು. ಝೈದ್ ಮತ್ತು ಹಬೀಬ ಅವರ ಮಕ್ಕಳಾಗಿದ್ದರು. ಅವರ ಪತ್ನಿ ಉಮ್ಮು ಝೈದ್ ಬಿನ್ತ್ ನಝ್ಲ ಬಿನ್ ಮಾಲಿಕ್. ಹಝ್ರತ್ ಮಲೀಲ್ ಬದರ್ ಯುದ್ಧ ಮತ್ತು ಇತರ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರೆಂದು ವರದಿಯಾಗಿದೆ. ಇನ್ನೊಬ್ಬ ಸಹಾಬಿ ಹಝ್ರತ್ ನೌಫಲ್ ಬಿನ್ ಅಬ್ದುಲ್ಲ ಬಿನ್ ನಝ್ಲ. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದಲ್ಲಿ ಅವರು ಶಹೀದರಾದರು. ಅವರಿಗೆ ಸಂತಾನಗಳಿರಲಿಲ್ಲ.

ಇನ್ನೊಬ್ಬ ಸಹಾಬಿ ಹಝ್ರತ್ ವದೀಅ ಬಿನ್ ಅಮರ್. ಅವರು ಬನೂ ಜಹೀನ ಗೋತ್ರದವರಾಗಿದ್ದರು. ಅದು ಬನೂ ನಜ್ಜಾರ್ ಗೋತ್ರದೊಂದಿಗೆ ಪ್ರತಿಜ್ಞಾಬದ್ಧವಾಗಿತ್ತು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್ ರಬೀಅ ಬಿನ್ ಅಮರ್ ಅವರ ಸಹೋದರ.

ಇನ್ನೊಬ್ಬ ಸಹಾಬಿ ಹಝ್ರತ್ ಯಝೀದ್ ಬಿನ್ ಮುನ್‌ಝಿರ್ ಬಿನ್ ಸರ್‌ಹ್. ಅವರು ಬನೂ ಖಝ್ರಜ್ ಗೋತ್ರದವರಾಗಿದ್ದರು. ಅವರು ಬೈಅತೆ ಉಖ್‌ಬಾದಲ್ಲಿ ಸೇರಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಮೃತರಾಗುವಾಗ ಅವರಿಗೆ ಮಕ್ಕಳಿರಲಿಲ್ಲ. ಅವರ ಸಹೋದರ ಮಾಖಿರ್ ಬಿನ್ ಮುನ್‌ಝಿರ್ ಸಹ ಬೈಅತೆ ಉಖ್‌ಬಾದಲ್ಲಿ ಮತ್ತು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಇನ್ನೊಬ್ಬ ಸಹಾಬಿ ಹಝ್ರತ್ ಖವಾರಿಜ ಬಿನ್ ಹಮೀರ್ ಅಶ್‌ಜಈ. ಅವರು ಅಶ್‌ಜಅ್ ಗೋತ್ರದವರಾಗಿದ್ದರು. ಆ ಗೋತ್ರ ಬನೂ ಖಝ್ರಜ್‌ರೊಂದಿಗೆ ಪ್ರತಿಜ್ಞಾಬದ್ಧವಾಗಿತ್ತು. ಅವರ ಸಹೋದರ ಅಬ್ದುಲ್ಲಾ ಬಿನ್ ಹಮೀರ್ ಬದರ್ ಯುದ್ಧದಲ್ಲಿ ಅವರೊಂದಿಗೆ ಭಾಗವಹಿಸಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಸುರಾಖ ಬಿನ್ ಉಮರ್. ಅವರು ಅನ್‌ಸಾರಿ (ಮದೀನ ನಿವಾಸಿ) ಆಗಿದ್ದರು. ಅವರು ಹಿಜರಿ 8 ಜಮಾದಿಲ್ ಅವ್ವಲ್‌ನಲ್ಲಿ ಮೌತ ಯುದ್ಧದಲ್ಲಿ ಶಹೀದರಾದರು. ಅವರ ತಾಯಿ ಅತೀಲ ಬಿನ್ತ್ ಖೈಸ್. ಸುರಾಖ ಮದೀನದ ಬನೂ ನಜ್ಜಾರ್ ಗೋತ್ರದವರಾಗಿದ್ದರು. ನಹ್‌ಜ, ಮೌಲಾ, ಅಮರ್ ಮತ್ತು ಸುರಾಖ ಮಧ್ಯೆ ಸಹೋದರ ಸಂಬಂಧವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಏರ್ಪಡಿಸಿದ್ದರು. ಅವರು ಬದರ್, ಉಹುದ್, ಖಂದಕ್, ಖೈಬರ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹುದೈಬಿಯಾ ಸಂಧಿ ಮತ್ತು ಉಮ್ರತುಲ್ ಖಝಾ ಸಂದರ್ಭಗಳಲ್ಲಿ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗಿದ್ದರು. ಹಝ್ರತ್ ಸುರಾಖ ಬಿನ್ ಉಮರ್ ಬೈಅತೆ ರಿಝ್ವಾನ್‌ನಲ್ಲಿ ಭಾಗವಹಿಸಿದ ಭಾಗ್ಯಶಾಲಿಗಳಲ್ಲೊಬ್ಬರಾಗಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಉಬಾದ್ ಬಿನ್ ಖೈಸ್. ಅವರು ಸಹ ಹಿಜರಿ ವರ್ಷ 8ರಲ್ಲಿ ಮೌತ ಯುದ್ಧದಲ್ಲಿ ಶಹೀದರಾದರು. ಹಝ್ರತ್ ಉಬಾದ್ ಹಝ್ರತ್ ಅಬೂ ದರ್ದಾರರವರ ಪಿತೃ ಸಹೋದರರಾಗಿದ್ದರು. ಅವರು ಬದರ್, ಉಹುದ್, ಖಂದಕ್, ಖೈಬರ್ ಯುದ್ಧಗಳಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಸವಾರರಾಗಿದ್ದರು. ಅವರು ಹುದೈಬಿಯಾ ಸಂಧಿಯಲ್ಲಿ ಸಹ ಭಾಗವಹಿಸಿದ್ದರು. ಮೌತ ಯುದ್ಧದಲ್ಲಿ ಅವರು ಶಹೀದರಾದರು. ಇನ್ನೊಬ್ಬ ಸಹಾಬಿ ಹಝ್ರತ್ ಅಬುದ್ದುಯ್ಯಾಹ್ ಬಿನ್ ಸಾಬಿತ್ ಬಿನ್ ನುಅ್‌ಮಾನ. ಅವರು ಬದರ್, ಉಹುದ್, ಖಂದಕ್ ಯುದ್ಧಗಳಲ್ಲಿಯೂ ಹುದೈಬಿಯಾ ಸಂಧಿಯಲ್ಲಿಯೂ ಭಾಗವಹಿಸಿದ್ದರು. ಖೈಬರ್ ಯುದ್ಧದಲ್ಲಿ ಹಿಜರಿ 7ರಲ್ಲಿ

ಶಹೀದರಾದರು. ಅವರ ತಲೆಗೆ ಒಬ್ಬ ಯಹೂದಿ ಖಡ್ಗದಿಂದ ಕಡಿದಾಗ ತಲೆ ಒಡೆದು ಅವರು ಶಹೀದರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಅನ್ಸ. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವಾತಂತ್ರ್ಯ ನೀಡಿದ ಹಬ್ಶೀ ಗುಲಾಮ್ ಆಗಿದ್ದರು. ಅವರ ಹೆಸರು ಅನ್ಸ ಎಂದೂ ಅಬೂ ಅನ್ಸ ಎಂದೂ ವರದಿಗಳಿವೆ. ಅವರಿಗೆ ಅಬೂ ಮಸ್ರೂಹ್ ಎಂಬ ಹೆಸರು ಸಹ ಇತ್ತು ಎಂದು ಕೆಲವರು ವರದಿ ಮಾಡಿದ್ದಾರೆ. ಅವರು ಇಸ್ಲಾಮಿನ ಆರಂಭ ಕಾಲದಲ್ಲಿ ಮುಸ್ಲಿಮರಾಗಿದ್ದರು. ಮದೀನಕ್ಕೆ ಹಿಜ್ರತ್ ಹೋದಾಗ ಅವರು ಹಝ್ರತ್ ಸಅದ್ ಬಿನ್ ಖೈಸ್‌ಮರ ಅತಿಥಿಯಾಗಿದ್ದರು. ಅವರು ಮೃತರಾಗುವ ತನಕ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸೇವೆ ಸಲ್ಲಿಸುವುದನ್ನು ತನ್ನ ವೃತ್ತಿಯನ್ನಾಗಿ ಮಾಡಿದ್ದರು. ಅವರ ವಿಧೇಯತೆ ಹೇಗಿತ್ತೆಂದರೆ ಕುಳಿತುಕೊಳ್ಳಬೇಕಾದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಮತಿ ಪಡೆದು ಕುಳಿತುಕೊಳ್ಳುತ್ತಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಅಬೂ ಕಬ್ಸ ಸಲೀಮ್. ಅವರು ಹಝ್ರತ್ ಉಮರ್ ರವರ ಖಿಲಾಫತ್ ಕಾಲದಲ್ಲಿ ಮೃತರಾದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವಾತಂತ್ರ್ಯ ನೀಡಿದ ಫಾರಸೀ ವಂಶಜ ಗುಲಾಮ್ ಆಗಿದ್ದರು. ಅವರು ಬದರೀ ಸಹಾಬಿಯಾಗಿದ್ದರು. ಅವರು ಆರಂಭ ಕಾಲದಲ್ಲಿ ಮುಸ್ಲಿಮರಾದವರು. ಹಿಜ್ರತ್‌ಗೆ ಅನುಮತಿ ಲಭಿಸಿದಾಗ ಮದೀನಕ್ಕೆ ಹೋದರು. ಅವರು ಬದರ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಮದೀನದಲ್ಲಿ ಹಝ್ರತ್ ಕುಲ್ಸೂಮ್ ಬಿನ್ ಅಲ್‌ಹದಮ್‌ರ ಮನೆಯಲ್ಲಿ ವಾಸಿಸಿದರು. ಇನ್ನೊಂದು ವರದಿ ಪ್ರಕಾರ ಅವರು ಹಝ್ರತ್ ಸಅದ್ ಬಿನ್ ಖೈಸಮರ ಮನೆಯಲ್ಲಿ ವಾಸಿಸಿದರು. ಹಝ್ರತ್ ಉಮರ್ ಖಿಲಾಫತ್ ಅಧಿಕಾರ ಸ್ವೀಕರಿಸಿದ ದಿನವೇ ಅವರು ಮೃತರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಮುರ್ಸಿದ್ ಬಿನ್ ಅಬೀ ಮುರ್ಸಿದ್. ಹಿಜರಿ ಮೂರನೆ ವರ್ಷ ಸಫರ್ ತಿಂಗಳಲ್ಲಿ ಅವರು ಮೃತರಾದರು. ಅವರು ಬದರೀ ಸಹಾಬಿಯಾಗಿದ್ದರು. ಅವರು ಹಝ್ರತ್ ಹಮ್ಝ ಬಿನ್ ಅಬ್ದುಲ್ ಮುತ್ತಲಿಬ್‌ರೊಂದಿಗೆ ಪ್ರತಿಜ್ಞಾಬದ್ಧ ಸಂಬಂಧ ಹೊಂದಿದ್ದರು. ಅವರು ತನ್ನ ತಂದೆಯೊಂದಿಗೆ ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಅವರು ಆರಂಭ ಕಾಲದಲ್ಲಿ ಮುಸ್ಲಿಮರಾದರು. ಅವರು ಬದರ್ ಯುದ್ಧದ ಮೊದಲು ಮದೀನಕ್ಕೆ ಹಿಜ್ರತ್ ಮಾಡಿದ್ದರು. ಅವರಿಗೆ ಹಝ್ರತ್ ಔಸ್ ಬಿನ್ ಸಾಮಿತ್‌ರೊಂದಿಗೆ ಸಹೋದರ ಸಂಬಂಧವೇರ್ಪಡಿಸಲಾಗಿತ್ತು. ಅವರು ಬದರ್ ಯುದ್ಧಕ್ಕೆ ಸುಬುಲ್ ಎಂಬ ಕುದುರೆ ಸವಾರಿ ಮಾಡುತ್ತಾ ಆಗಮಿಸಿದ್ದರು. ಇಬ್ನು ಇಸ್‌ಹಾಖ್ ಹೀಗೆ ಬರೆದಿದ್ದಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರಜೀಅ್‌ಗೆ ಕಳುಹಿಸಿದ ಸೈನ್ಯದ ಸೇನಾಧಿಪತಿ ಹಝ್ರತ್ ಮುರ್ಸಿದ್ ರಝಿಯಲ್ಲಾಹು ಅನ್‌ಹು ಆಗಿದ್ದರು. ಬೇರೆ ಕೆಲವರ ಅಭಿಪ್ರಾಯ ಪ್ರಕಾರ ಆ ಸೈನ್ಯದ ಸೇನಾಧಿಪತಿ ಹಝ್ರತ್ ಆಸಿಮ್ ಬಿನ್ ಸಾಬಿತ್ ಆಗಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಅಬೂ ಮುರ್ಸಿದ್ ಬಿನ್ ಆಸ್ ಬಿನ್ ಅಲ್ ಹುಸೈನ್ ಗನವೀ. ಅವರು ಹಿಜರಿ 12ರಲ್ಲಿ ಮೃತರಾದರು. ಅವರು ಸಿರಿಯಾದ ನಿವಾಸಿಯಾಗಿದ್ದರು. ಅವರು ಆರಂಭ ಕಾಲದಲ್ಲಿ ಮುಸ್ಲಿಮರಾಗಿದ್ದರು. ಹಿಜ್ರತ್‌ಗೆ ಅನುಮತಿ ಲಭಿಸಿದಾಗ ಅವರು ಮದೀನಕ್ಕೆ ಹಿಜ್ರತ್ ಮಾಡಿದರು. ಹಝ್ರತ್ ಉಬಾದ ಬಿನ್ ಸಾಮಿತ್‌ರೊಂದಿಗೆ ಅವರಿಗೆ ಸಹೋದರ ಪ್ರತಿಜ್ಞೆ ಮಾಡಿಸಲಾಗಿತ್ತು. ಹಝ್ರತ್ ಅಬೂ ಮುರ್ಸಿದ್ ಮತ್ತು ಅವರ ಪುತ್ರ ಮದೀನಕ್ಕೆ ಹಿಜ್ರತ್ ಮಾಡಿದಾಗ ಅವರಿಬ್ಬರೂ ಹಝ್ರತ್ ಕುಲ್ಸೂಮ್ ಬಿನ್ ಅಲ್ ಹದಮ್‌ರ ನಿವಾಸದಲ್ಲಿ ವಾಸಿಸಿದರು. ಹಝ್ರತ್ ಅಬೂ ಮುರ್ಸಿದ್ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್ ಅಬೂ ಮುರ್ಸಿದ್‌ರಿಗೆ ಚರಿತ್ರೆಯಲ್ಲಿ ಮತ್ತೊಂದು ಸ್ಥಾನ ಸಹ ಇದೆ. ಮಕ್ಕದ ವಿಜಯದ ಮೊದಲು ಹಝ್ರತ್ ಹಾತಿಬ್ ಬಿನ್ ಅಬೀ ಬಲ್ತ ಒಬ್ಬ ಮಹಿಳೆ ಮುಖಾಂತರ ಮಕ್ಕದವರಿಗೆ ಒಂದು ರಹಸ್ಯ ಪತ್ರ ರವಾನಿಸಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಪತ್ರ ರವಾನಿಸಲು ಭದ್ರತಾ ಪಡೆಯನ್ನು ಕಳುಹಿಸಿದ್ದರು. ಅವರ ಪೈಕಿ ಒಬ್ಬ ಸವಾರ ಹಝ್ರತ್ ಅಬೂ ಮುರ್ಸಿದ್ ಆಗಿದ್ದರು. ಅವರು ಒಂದು ಹದೀಸ್ ಸಹ ವರದಿ ಮಾಡಿದ್ದಾರೆ. ಹಝ್ರತ್ ಅಬೂಬಕರ್‌ರವರ ಖಿಲಾಫತ್ ಕಾಲದಲ್ಲಿ ಹಿಜರಿ 12ರಲ್ಲಿ 66ನೇ ವಯಸ್ಸಿನಲ್ಲಿ ಅವರು ಮೃತರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಸಲೀತ್ ಬಿನ್ ಖೈಸ್ ಬಿನ್ ಅಮರ್. ಅವರು ಹಿಜರಿ 14ರಲ್ಲಿ ಮೃತರಾದರು. ಹಝ್ರತ್ ಸಲೀತ್ ಬಿನ್ ಖೈಸ್ ಮತ್ತು ಹಝ್ರತ್ ಅಬೂ ಸಲ್ಮಾ ಇವರಿಬ್ಬರು ಮುಸ್ಲಿಮರಾದ ನಂತರ ಬನೂ ಊದಿ ವಂಶದ ಅದಿ ಬಿನ್ ನಜ್ಜಾರ್‌ಗೆ ಸೇರಿದ ವಿಗ್ರಹವನ್ನು ಮುರಿದು ಹಾಕಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಿಜ್ರತ್ ಮಾಡಿ ಮದೀನಕ್ಕೆ ತಲಪಿದಾಗ ಅವರ ಒಂಟೆ ಬನೂ ಅದಿ ಗೋತ್ರದ ಮನೆಯ ಸಮೀಪಕ್ಕೆ ತಲಪಿದಾಗ ಹಝ್ರತ್ ಸಲೀತ್ ಬಿನ್ ಖೈಸ್, ಅಬೂ ಸಲೀತ್, ಅಸೀರ ಬಿನ್ ಅಬೂ ಖವಾರಿಜ ಜೊತೆ ಸೇರಿ ಒಂಟೆಯನ್ನು ನಿಲ್ಲಿಸಲು ಪ್ರಯತ್ನಿಸಿದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ಅದನ್ನು ಬಿಟ್ಟುಬಿಡಿರಿ. ಅದು ನಿಯೋಜಿಸಲ್ಪಟ್ಟಿದೆ. ಅಲ್ಲಾಹನು ಇಚ್ಛಿಸುವವಲ್ಲಿ ಅದು ಸ್ವತಃ ನಿಲ್ಲುವುದು. ಹಝ್ರತ್ ಸಲೀತ್ ಬದರ್ ಮತ್ತು ಇತರ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಿಜರಿ 14ರಲ್ಲಿ ಹಝ್ರತ್ ಉಮರರ ಖಿಲಾಫತ್ ಕಾಲದಲ್ಲಿ ಜಸರ್ ಅಬೀ ಉಬೈದ್ ಯುದ್ಧದಲ್ಲಿ ಶಹೀದರಾದರು. ಇನ್ನೊಬ್ಬ ಸಹಾಬಿ ಹಝ್ರತ್ ಮುಜ್‌ಝುರ್ ಬಿನ್ ಝಿಯಾದ್. ಮುಜ್‌ಝುರ್ ಎಂಬುದು ಅವರ ಬಿರುದಾಗಿತ್ತು. ಅದರ ಅರ್ಥ ದಪ್ಪ ಶರೀರದವನೆಂದು. ಹಝ್ರತ್ ಮುಜ್‌ಝಿರ್ ಮತ್ತು ಆಖಿಲ್ ಬಿನ್ ಬಕೀರ್ ಮಧ್ಯೆ ಸಹೋದರ ಸಂಬಂಧವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು

ಸ್ಥಾಪಿಸಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಇಬ್ನು ಇಸ್‌ಹಾಖ್ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರು, ಅಬೂ ಬಖ್ತುರಿಯನ್ನು ಹತ್ಯೆ ಮಾಡಬಾರದು ಎಂದು. ಏಕೆಂದರೆ ಅವರು ಮಕ್ಕದ ಜನರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಹಿಂಸೆ ನೀಡುವುದರಿಂದ ತಡೆದಿದ್ದರು. ಅವರು ಸಹ ಸ್ವತಃ ಯಾವುದೇ ಹಿಂಸೆ ನೀಡಿರಲಿಲ್ಲ. ಖುರೈಶರು ಬನೂ ಹಾಶಿಮ್ ಮತ್ತು ಬನೂ ಮುತ್ತಲಿಬ್ ವಿರುದ್ಧ ಮಾಡಿದ ಒಪ್ಪಂದದ ವಿರುದ್ಧವಾಗಿ ನಿಂತವರಲ್ಲಿ ಅಬೂ ಬಖ್ತುರಿ ಒಬ್ಬರಾಗಿದ್ದರು. ಅವರ ಜೊತೆಗಾರರಾಗಿ ಮತ್ತೊಬ್ಬರು ಸಹ ಇದ್ದರು. ಹಝ್ರತ್ ಅಬೂ ಮುಜ್ಝುರ್‌ರವರು ಅಬೂ ಬಖ್ತುರಿಯನ್ನು ಭೇಟಿಯಾಗಿ 'ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಮ್ಮನ್ನು ಕೊಲ್ಲಬಾರದೆಂದು ಹೇಳಿದ್ದಾರೆ' ಎಂದು ಹೇಳಿದಾಗ ಅಬೂ ಬಖ್ತುರಿ ಕೇಳಿದರು: ನನ್ನ ಸಂಗಡಿಗನ ಬಗ್ಗೆ ಏನು ಆಜ್ಞೆ ಇದೆ. ಅಬೂ ಮುಜ್ಝುರ್ ಹೇಳಿದರು: ಅಲ್ಲಾಹನಾಣೆ ನಾವು ನಿಮ್ಮ ಸಂಗಡಿಗನನ್ನು ಬಿಡಲಾರೆವು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಮ್ಮ ಬಗ್ಗೆ ಮಾತ್ರ ಆಜ್ಞೆ ನೀಡಿದ್ದಾರೆ. ಆಗ ಅಬೂ ಬಖ್ತುರಿ ಹೇಳಿದರು: ನಾವು ಸಾಯುವುದಾದರೆ ಜೊತೆಗೂಡಿ ಸಾಯುವೆವು. ನಾನು ನನ್ನ ಜೀವಕ್ಕೋಸ್ಕರ ನನ್ನ ಸಂಗಡಿಗನ ಕೈ ಬಿಟ್ಟೆನು ಎಂದು ಮಕ್ಕದ ಮಹಿಳೆಯರು ಹೇಳುವುದನ್ನು ನಾನು ಸಹಿಸಲಾರೆ. ಆಗ ಅವರಿಬ್ಬರು ಹಝ್ರತ್ ಮುಜ್ಝುರ್‌ರೊಂದಿಗೆ ಹೋರಾಡಿದರು. ಅವರಿಬ್ಬರನ್ನು ಮುಜ್ಝುರ್ ಹತ್ಯೆಮಾಡಿದರು. ಹಝ್ರತ್ ಮುಜ್ಝುರ್‌ರವರ ಮಕ್ಕಳು ಮದೀನದಲ್ಲಿಯೂ ಬಗ್‌ದಾದಿನಲ್ಲಿಯೂ ಇದ್ದರು. ಅಬೀವಾಯಿಝು ವರದಿ ಮಾಡುತ್ತಾರೆ: ಉಹುದ್ ಯುದ್ಧದಲ್ಲಿ ಶಹೀದರಾದವರಲ್ಲಿ ಮೂವರನ್ನು ಒಂದು ಖಬರಿನಲ್ಲಿ ದಫನ್ ಮಾಡಲಾಗಿತ್ತು. ಅವರು ಮುಜ್ಝುರ್ ಬಿನ್ ಝಿಯಾದ್, ನುಅ್‌ಮಾನ್ ಬಿನ್ ಮಾಲಿಕ್ ಮತ್ತು ಅಬ್ದುಹು ಬಿನ್ ಹಸ್ಸಾಸ್ ಆಗಿದ್ದಾರೆ.

ಹಝ್ರತ್ ಹಬ್ಬಾಬ್ ಬಿನ್ ಮುನ್‌ಝಿರ್ ಬಿನ್ ಜಮೂಹ್ ಒಬ್ಬ ಸಹಾಬಿಯಾಗಿದ್ದರು. ಹಝ್ರತ್ ಉಮರ್‌ರ ಖಿಲಾಫತ್ ಕಾಲದಲ್ಲಿ ಅವರು ನಿಧನ ಹೊಂದಿದರು. ಅವರು ಬದರ್, ಉಹುದ್, ಖಂದಕ್ ಮತ್ತಿತರ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದಲ್ಲಿ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಸ್ಥಿರ ಹೆಜ್ಜೆ ಹೊಂದಿದ್ದರು. ಮೃತನಾಗಲು ಸಿದ್ಧನೆಂದು ಪ್ರತಿಜ್ಞೆ ಮಾಡಿದ್ದರು. ಬದರ್ ಯುದ್ಧದ ಸಂದರ್ಭದಲ್ಲಿ ಮುಸ್ಲಿಮ್ ಸೈನ್ಯ ಡೇರೆ ಹಾಕಿದ್ದ ಸ್ಥಳದ ಬಗ್ಗೆ ಹಝ್ರತ್ ಹಬ್ಬಾಬ್ ಬಿನ್ ಮುಂಝಿರ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಕೇಳಿದರು: ತಾವು ಈ ಸ್ಥಳವನ್ನು ಆಯ್ಕೆ ಮಾಡಿದುದು ಅಲ್ಲಾಹನ ನಿರ್ದೇಶ ಪ್ರಕಾರವೋ ಅಥವಾ ರಣತಂತ್ರದ ಪ್ರಕಾರವೋ? ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಇದರ ಬಗ್ಗೆ ಯಾವುದೇ ದೈವಿಕ ಆಜ್ಞೆ ಲಭಿಸಿಲ್ಲ. ನೀವು ಸಲಹೆ ನೀಡಲು ಇಚ್ಛಿಸುವುದಾದರೆ ನೀಡಬಹುದು ಎಂದು ಹೇಳಿದರು. ಆಗ ಹಝ್ರತ್ ಹಬ್ಬಾಬ್ ಹೇಳಿದರು: ನನ್ನ ಅಭಿಪ್ರಾಯ ಪ್ರಕಾರ ಈ ಸ್ಥಳ ಸೂಕ್ತವಲ್ಲ. ನಾವು ಮುಂದೆ ಸಾಗಿ ನೀರೊರತೆಯ ಸ್ಥಳದಲ್ಲಿ ತಂಗಬೇಕು. ನನಗೆ ಆ ನೀರೊರತೆಯ ಸ್ಥಳ ತಿಳಿದಿದೆ. ಅದರ ನೀರು ಉತ್ತಮವೂ ಧಾರಾಳವಾಗಿಯೂ ಇದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ಸಲಹೆ ಇಷ್ಟವಾಯಿತು. ಮಕ್ಕದ ಖುರೈಶಿಗಳು ಆ ನೀರ ಸಮೀಪ ತಲಪಿರಲಿಲ್ಲ. ಅವರು ಬೆಟ್ಟದಾಚೆ ಭಾಗದಲ್ಲಿ ತಳವೂರಿದ್ದರು. ಮುಸ್ಲಿಮರು ಮುಂದೆ ಸಾಗಿ ಆ ನೀರ ಒರತೆಯನ್ನು ಸ್ವಾಧೀನ ಪಡಿಸಿದರು.

ಹಝ್ರತ್ ಇಬ್ನು ಅಬ್ಬಾಸ್ ಹೇಳುತ್ತಾರೆ: ಹಝ್ರತ್ ಜಿಬ್ರೀಲ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ಹೇಳಿದರು: ಹಝ್ರತ್ ಹಬ್ಬಾಬರ ಸಲಹೆ ಸರಿಯಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಹಬ್ಬಾಬ್, ನೀವು ಸರಿಯಾದ ಸಲಹೆ ನೀಡಿದಿರಿ. ಬದರ್ ಯುದ್ಧದಲ್ಲಿ ಖಝ್ರಜ್ ಗೋತ್ರದವರ ಪತಾಕೆ ಹಝ್ರತ್ ಹಬ್ಬಾಬರ ಕೈಯಲ್ಲಿತ್ತು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದಾಗ ಅವರ ಪ್ರಾಯ 33 ಆಗಿತ್ತು. ಖುರೈಶರ ಸೈನ್ಯ ಸಮೀಪಕ್ಕೆ ಬಂದ ಬಗ್ಗೆ ಗೂಢಚಾರರಿಂದ ತಿಳಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಬ್ಬಾಬರನ್ನು ಕಳುಹಿಸಿ ಶತ್ರು ಸೈನ್ಯದ ಸಂಖ್ಯೆ ಮತ್ತು ಶಕ್ತಿಯ ಬಗ್ಗೆ ತಿಳಿಯಲು ಬಯಸಿದರು. ಹಬ್ಬಾಬ್ ರಹಸ್ಯವಾಗಿ ಹೋಗಿ ಶತ್ರು ಸೈನ್ಯದ ಮಾಹಿತಿ ಬೇಗನೆ ಗಳಿಸಿ ಹಿಂದಿರುಗಿದರು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿದರು. ಯೌಮೆ ಖುರೈಝು ಮತ್ತು ಯೌಮುನ್ನಝೀರ್ ಸಂದರ್ಭದಲ್ಲಿ ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಹಬ್ಬಾಬರ ಸಲಹೆ ಪಡೆದಿದ್ದರು. ಹಝ್ರತ್ ಉಮರ್‌ರ ಖಿಲಾಫತ್ ಕಾಲದಲ್ಲಿ ಅವರು ನಿಧನ ಹೊಂದಿದರು.

ಹಝ್ರತ್ ಹಬ್ಬಾಬ್ ಬಿನ್ ಮುಂಝಿರ್ ವರದಿ ಮಾಡುತ್ತಾರೆ: ಹಝ್ರತ್ ಜಿಬ್ರೀಲ್ ಅಲೈಹಿಸ್ಸಲಾಮ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪ ಬಂದು ಕೇಳಿದರು: ನಿಮಗೆ ಎರಡು ವಿಷಯಗಳಲ್ಲಿ ಯಾವುದು ಹೆಚ್ಚು ಇಷ್ಟಕರವಾಗಿದೆ. ನೀವು ನಿಮ್ಮ ಸಹಾಬರ ಜೊತೆ ಲೋಕದಲ್ಲಿ ವಾಸಿಸಲು ಇಚ್ಛಿಸುತ್ತೀರೋ ಅಥವಾ ಅಲ್ಲಾಹನು ನಿಮಗೆ ನೀಡಿದ ಸ್ವರ್ಗದ ಅನುಗ್ರಹಗಳ ವಾಗ್ದಾನಗಳೊಂದಿಗೆ ನಿಮ್ಮ ಪ್ರಭುವಿನ ಬಳಿಗೆ ಮರಳಲು ಇಚ್ಛಿಸುತ್ತೀರೋ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹಾಬರೊಂದಿಗೆ ಕೇಳಿದರು ನಿಮ್ಮ ಸಲಹೆ ಏನು? ಸಹಾಬರು ಹೇಳಿದರು: ನೀವು ನಮ್ಮ ಜೊತೆ ಇರುವುದು ನಮಗೆ ಹೆಚ್ಚು ಪ್ರಿಯಕರವಾಗಿದೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಬ್ಬಾಬ್ ಬಿನ್ ಮುಂಝಿರ್ ಕಡೆಗೆ ನೋಡಿ ಹೇಳಿದರು: ನಿಮಗೇನಾಗಿದೆ, ನೀವೇಕೆ ಮಾತನಾಡುವುದಿಲ್ಲ. ಹಬ್ಬಾಬ್

ಹೇಳುತ್ತಾರೆ, ನಾನು ಹೇಳಿದೆ: ಓ ಅಲ್ಲಾಹನ ಸಂದೇಶವಾಹಕರೇ, ನಿಮ್ಮ ಪ್ರಭು ನಿಮಗೋಸ್ಕರ ಇಷ್ಟ ಪಡುವುದನ್ನು ನೀವು ಅವಲಂಬಿಸಿರಿ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ಮಾತನ್ನು ಇಷ್ಟಪಟ್ಟರು.

ಇನ್ನೊಬ್ಬ ಸಹಾಬಿ ಹಝ್ರತ್ ರಿಫಾಅ್ ಬಿನ್ ರಾಫಿಅ್ ಬಿನ್ ಮಾಲಿಕ್ ಬಿನ್ ಅಜ್ಲಾನ್. ಅವರು ಅನ್ಸಾರಿ ಸಹಾಬಿಯಾಗಿದ್ದರು. ಹಝ್ರತ್ ಅಮೀರ್ ಮುಆವಿಯರ ಅಧಿಕಾರದ ಆರಂಭದ ಕಾಲದಲ್ಲಿ ಅವರು ಮೃತರಾದರು. ಅವರು ಎಲ್ಲಾ ಯುದ್ಧಗಳಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗಿದ್ದರು. ಅವರ ಇಬ್ಬರು ಸಹೋದರರಾದ ಖಲ್ಲಾದ್ ಬಿನ್ ರಾಫಿಅ್ ಮತ್ತು ಮಾಲಿಕ್ ಬಿನ್ ರಾಫಿಅ್ ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಹಝ್ರತ್ ಮುಆಝ್ ತನ್ನ ಪಿತ ರಿಫಾಅ್ ಬಿನ್ ರಾಫಿಅ್‌ರಿಂದ ವರದಿ ಮಾಡುತ್ತಾರೆ. ಅವರ ಪಿತ ಬದರ್ ಯುದ್ಧದಲ್ಲಿ ಹೋರಾಡಿದವರಲ್ಲಿ ಸೇರಿದ್ದರು. ಅವರು ಹೇಳಿದರು: ಜಿಬ್ರೀಲ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪ ಬಂದು ಹೇಳಿದರು: ನೀವು ಮುಸ್ಲಿಮರ ಪೈಕಿ ಬದರ್ ಯುದ್ಧದಲ್ಲಿ ಭಾಗವಹಿಸಿದವರಿಗೆ ಯಾವ ಸ್ಥಾನ ನೀಡುವಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅವರು ಅತ್ಯುತ್ತಮ ಮುಸ್ಲಿಮರಾಗಿದ್ದಾರೆ. ಹಝ್ರತ್ ಜಿಬ್ರೀಲ್ ಅಲೈಹಿಸ್ಸಲಾಮ್ ಹೇಳಿದರು: ಅದೇ ರೀತಿ ಬದರ್ ಯುದ್ಧದಲ್ಲಿ ಭಾಗವಹಿಸಿದ ಮಲಕ್‌ಗಳು ಸಹ ಶ್ರೇಷ್ಠರಾಗಿದ್ದಾರೆ.

ಒಂದು ಘಟನೆಗೆ ಸಂಬಂಧಿಸಿ ಇನ್ನಷ್ಟು ವಿಶದೀಕರಿಸಲು ಇಚ್ಛಿಸುತ್ತೇನೆ. ಹಝ್ರತ್ ಅಮರ್ ಬಿನ್ ಆಸ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದುದಾಗಿ ಆಲಿಸಿದರು: ಅಮ್ಮಾರ್ ಬಿನ್ ಯಾಸಿರ್‌ರನ್ನು ವಿದ್ರೋಹಿಗಳ ಗುಂಪು ಹತ್ಯೆ ಮಾಡುವುದು ಎಂದು. ಹಝ್ರತ್ ಅಮ್ಮಾರ್‌ರನ್ನು ಶಹೀದರನ್ನಾಗಿ ಮಾಡಿದುದು ಹಝ್ರತ್ ಅಮೀರ್ ಮುಆವಿಯರ ಸೈನಿಕರಾಗಿದ್ದರು. ಈ ವಿಷಯದ ಬಗ್ಗೆ ಕೆಲವರು ಪ್ರಶ್ನೆ ಕೇಳುತ್ತಾರೆ. ಅಮೀರ್ ಮುಆವಿಯ ವಿದ್ರೋಹಿಗಳ ಗುಂಪಿನವರಾಗಿರುವಾಗ ಅವರ ಹೆಸರನ್ನು ಗೌರವದಿಂದ ಬಳಸುವುದೇಕೆ. ಹಝ್ರತ್ ಅಮೀರ್ ಮುಆವಿಯರಿಗೆ ನಮ್ಮ ಜಮಾಅತಿನ ಕೃತಿಗಳಲ್ಲಿ ಸಹ ಒಂದು ಗೌರವದ ಸ್ಥಾನವಿದೆ. ಇದರ ಬಗ್ಗೆ ನಾನು ಮೊದಲು ಹೇಳಲು ಬಯಸುವುದೇನೆಂದರೆ, ಈ ಸಹಾಬಿಗಳ ಪೈಕಿ ಯಾರು ಕ್ಷಮಿಸಲ್ಪಡುವವರು ಯಾರು ಕ್ಷಮಿಸಲ್ಪಡಲಾರರು ಎಂದು ಹೇಳುವುದು ನಮ್ಮ ಕೆಲಸವಲ್ಲ. ಅಬೂ ಝುಹಾ ವರದಿ ಮಾಡುತ್ತಾರೆ: ಹಝ್ರತ್ ಅಬ್ದುಲ್ಲಾ ಬಿನ್ ಮಸ್ಊದರ ಜ್ಞಾನಭರಿತ ಶಿಷ್ಯರಲ್ಲಿ ಒಬ್ಬರಾಗಿದ್ದ ಅಮರ್ ಬಿನ್ ಶರ್ಜೀಲ್ ಅಬೂ ಮೈಸರ ಸ್ವಪ್ನದಲ್ಲಿ ಹೀಗೆ ಕಂಡರು: ಒಂದು ಹಚ್ಚಹಸುರಾದ ತೋಟದಲ್ಲಿ ಕೆಲವು ಡೇರೆಗಳನ್ನು ಹಾಕಲಾಗಿದೆ. ಅವುಗಳಲ್ಲಿ ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ಇದ್ದರು. ಬೇರೆ ಕೆಲವು ಡೇರೆಗಳಲ್ಲಿ ಝುಲ್ ಖಿಲಾಅ್ ಇದ್ದರು. ಅಬೂ ಮೈಸರ ಕೇಳಿದರು: ಇದು ಹೇಗೆ? ಅವರು ಪರಸ್ಪರ ಯುದ್ಧ ಮಾಡಿದ್ದರು. ಆಗ ಅವರಿಗೆ ಹೀಗೆ ಉತ್ತರ ಲಭಿಸಿತು: ಅವರಿಗೆ ಅಲ್ಲಾಹನು **ವಾಸಿಉಲ್ ಮಗ್ಫಿರತ್** (ಬಹಳ ವಿಶಾಲವಾಗಿ ಕ್ಷಮಿಸುವವನು) ಆಗಿ ಕಾಣಿಸಿದನು. ಆದುದರಿಂದ ಅವರು ಈಗ ಒಂದೇ ಸ್ಥಳದಲ್ಲಿ ಇದ್ದಾರೆ.

ಈ ವಿಷಯಗಳೆಲ್ಲಾ ಅಲ್ಲಾಹನ ಸುಪರ್ದಿಗೆ ಸೇರಿವೆ. ಈ ವಿಷಯಗಳಿಗೆ ಮತ್ತು ಈ ಭಿನ್ನಾಭಿಪ್ರಾಯಗಳಿಗೆ ನಮ್ಮ ಹೃದಯದಲ್ಲಿ ಸ್ಥಳ ನೀಡಬಾರದು. ಈ ವಿಷಯಗಳಿಗೆ ಸಂಬಂಧಿಸಿ ಮುಸ್ಲಿಮರಲ್ಲಿ ಒಡಕು ಹುಟ್ಟುತ್ತಾ ಮುಂದುವರಿಯಿತು. ಅದರ ಪರಿಣಾಮ ಇಂದು ಸಹ ನಾವು ಕಾಣುತ್ತಿದ್ದೇವೆ. ಇವುಗಳು ನಮಗೆ ನೀತಿಪಾಠ ದಾಯಕವಾಗಿವೆ. ಇವುಗಳ ಬಗ್ಗೆ ಯೋಚಿಸುವುದಕ್ಕೆ ಪ್ರತಿಯಾಗಿ ಐಕ್ಯತೆಯನ್ನು ಹೊಂದಬೇಕು. ನಾವು ಯಾವಾಗಲೂ ಐಕ್ಯದಿಂದಿರುವಂತೆ ಅಲ್ಲಾಹನು ನಮಗೆ ಭಾಗ್ಯ ನೀಡಲಿ. ನಾವು ಒಳಿತಿನಲ್ಲಿ ಅಭಿವೃದ್ಧಿಗಳಿಸುವವರಾಗಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 06-07-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon